# ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ

**ಸಿ.ಸಿ ನಂ.1137/2019**

1) ಕರ್ನಾಟಕ ಸರ್ಕಾರ (ಮುಧೋಳ ಪೊಲೀಸ)

...ಪಿರ್ಯಾದಿದಾರರು.

**- ವಿರುದ್ಧ -**

ಆ 1) ದ್ಯಾಮವ್ವ ಕಲ್ಲಪ್ಪ ಮೇಟಗುಡ್ಡ, ವಯಾಃ

ಆ 3) ಹನಮಂತ ಕಲ್ಲಪ್ಪ ಮೇಟಗುಡ್ಡ, ವಯಾಃ 40

ಆ 4) ಶೆಟ್ಟೆಪ್ಪ ಕಲ್ಲಪ್ಪ ಮೇಟಗುಡ್ಡ, ವಯಾಃ 50

ಆ 5) ಶೆಟ್ಟೆಪ್ಪ ಕಲ್ಲವ್ವ ಕಳ್ಳಿಮನಿ, ವಯಾಃ 45

ಎಲ್ಲರೂ ಸಾಃ ಕುಳಲಿ, ತಾಃ ಮುಧೋಳ, ಜಿಲ್ಲಾ ಬಾಗಲಕೋಟ.

.......ಆರೋಪಿತರು

= = = =

ನಾನುಃ **ಶ್ರೀ. ಸಿದ್ದನಗೌಡ ಪಾಟೀಲ ಟಿ.**
ಬಿ.ಎ., ಎಲ್.ಎಲ್.ಎಮ್.
ಪ್ರಧಾನ ಪ್ರ.ದ.ನ್ಯಾ.ದಂ., ಮುಧೋಳ.

ಆದ ನಾನು ಈ ಪ್ರಕರಣದ ಆರೋಪಿಗಳಾದ ನಿಮ್ಮಗಳ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ.

**-:: ದೋಷಾರೋಪಣೆ ::-**

ದಿನಾಂಕ 20-09-2018 ರಂದು ರಾತ್ರಿ 10-30 ಗಂಟೆಯ ಸುಮಾರಿಗೆ ಮುಧೋಳ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಕುಳಲಿ ಗ್ರಾಮದಲ್ಲಿ ಪಿರ್ಯಾದಿಯ ಗಂಡ ಆರೊಪಿ ನಂ.5 ನೇದವನು ಆರೋಪಿ ನಂ.1 ನೇದವಳ ಜೊತೆ ಅನೈತಿಕ ಸಂಬಂದ ಇಟ್ಟುಕೊಂಡಿದ್ದು, ಈ ವಿಚಾರವಾಗಿ ಆರೋಪಿಗಳಾದ ನೀವುಗಳು ಪಿರ್ಯಾದಿಯ ಜೋತೆ ಜಗಳಾ ಮಾಡುತ್ತಾ ಬಂದು ಮೇಲೆ ಹೇಳಿದ ದಿನಾಂಕದಂದು 1 ನೇ ಆರೋಪಿಯಾದ ನೀನು ಪಿರ್ಯಾದಿಗೆ ಫೋನ ಮಾಡಿ ನಿನ್ನ ಗಂಡನ ಕೈಯಲ್ಲಿ ಕೊಡು ಅಂತಾ ಅಂದಾಗ ಪಿರ್ಯಾದಿಯು ಅವರು ಮಲಗಿದ್ದಾರೆ ಬೆಳಿಗ್ಗೆ ಮಾತನಾಡು ಅಂತಾ ಹೇಳಿದಾಗ 1 ನೇ ಆರೋಪಿಯಾದ ನೀನು ಹಾದರಗಿತ್ತಿ, ಬೊಸಡಿ ಅವಾಚ್ಯವಾಗಿ ಹಲ್ಕಟ ಬೈದು, ಆ ಮೂಲಕ ನೀವು ಭಾ.ದಂ.ಸಂ. **ಕಲಂ.504** ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ

2) ಮೇಲೆ ಹೇಳಿದ ಸ್ಥಳ, ದಿನಾಂಕ, ವೇಳೆ ಮತ್ತು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿತರಾದ ನೀವೆಲ್ಲರೂ ಸೇರಿಕೊಂಡು ಪಿರ್ಯಾದಿಯ ಮನೆಗೆ ಅತಿಕ್ರಮಣ ಪ್ರವೇಶ ಮಾಡಿ, ಆ ಮೂಲಕ ನೀವು ಭಾ.ದಂ.ಸಂ. **ಕಲಂ.448 ಸಹಕಲಂ 149** ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿತರಾದ ನೀವುಗಳು ಸೇರಿಕೊಂಡು ಪಿರ್ಯಾದಿಗೆ ತಲೆಗೂದಲು ಹಿಡಿದು ಜಗ್ಗಾಡಿ, ಎಳೆದಾಡಿ, ತೆಕ್ಕಿಬಡಿದು, ಸೀರೆ ಹಾಗೂ ಜಂಪರ ಹಿಡಿದು ಎಳೆದು ಅವಾಚ್ಯವಾಗಿ ಬೈಯುತ್ತಾ ಹೊಡಿ ಬಡಿ ಮಾಡಿ ಸಾಧಾ ಗಾಯಪೆಟ್ಟುಪಡಿಸಿ, ಆ ಮೂಲಕ ನೀವುಗಳು **ಭಾ.ದಂ.ಸಂ. 323 ಸಹವಾಚಕ 149** ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2,3,4 ನೇ ಆರೋಪಿತರಾದ ನೀವುಗಳು ಸೇರಿಕೊಂಡು ಪಿರ್ಯಾದಿಗೆ ತಲೆಗೂದಲು ಹಿಡಿದು ಜಗ್ಗಾಡಿ, ಎಳೆದಾಡಿ, ತೆಕ್ಕಿಬಡಿದು, ಮೈಮೇಲಿನ ಸೀರೆ ಹಾಗೂ ಜಂಪರ ಹಿಡಿದು ಎಳೆದು ಅಪಮಾನ ಮಾಡುವ ಉದ್ದೇಶದಿಂದಲೇ ಈ ಕೃತ್ಯ ಎಸಗಿ , ಆ ಮೂಲಕ ನೀವು **ಭಾ.ದಂ.ಸಂ. 354(ಬಿ) ಸಹವಾಚಕ 149** ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 5 ನೇ ಆರೋಪಿತನಾದ ನಿನ್ನ ಚೇತಾವಣೆಯಿಂದ 3 ರಿಂದ 4 ನೇ ಆರೋಪಿತರೇಲ್ಲರೂ ಸೇರಿಕೊಂಡು ಪಿರ್ಯಾದಿಗೆ ತಲೆಗೂದಲು ಹಿಡಿದು ಜಗ್ಗಾಡಿ, ಎಳೆದಾಡಿ, ತೆಕ್ಕಿಬಡಿದು, ಮೈಮೇಲಿನ ಸೀರೆ ಹಾಗೂ ಜಂಪರ ಹಿಡಿದು ಎಳೆದು ಮಾನಭಂಗ ಮಾಡಲು ಕೃತ್ಯ ಎಸಗಲು ಪ್ರಚೋದನೆ ನೀಡಿ, ಆ ಮೂಲಕ ನೀನು **ಭಾ.ದಂ.ಸಂ. 109 ಸಹವಾಚಕ 149** ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮಗಳ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಪ್ರಶ್ನೇಃ 1) - ಈ ಆಪಾದನೆಯನ್ನು ಓದಿ ಹೇಳಿದ್ದು ನಿಮಗೆ ತಿಳಿಯಿತೇ?
ಉತ್ತರ- ತಿಳಿಯಿತು.

ಪ್ರಶ್ನೇಃ 2) - ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರ- ಸುಳ್ಳು,ವಿಚಾರಣೆಯಾಗಬೇಕು.

***(ಆರೋಪಿತರಿಗೆ ದೋಷಾರೋಪಣೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು.)***

**ಓ ಹೇ ಕೇ ಸರಿ ಇದೆ.**

Sd/-

ದಿನಾಂಕಃ 18-01-2024.

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,**
**ಮುಧೋಳ.**

1) ದ್ಯಾಮವ್ವ ಕಲ್ಲಪ್ಪ ಮೇಟಗುಡ್ಡ

3) ಹನಮಂತ ಕಲ್ಲಪ್ಪ ಮೇಟಗುಡ್ಡ

4) ಶೆಟ್ಟೆಪ್ಪ ಕಲ್ಲಪ್ಪ ಮೇಟಗುಡ್ಡ

5) ಶೆಟ್ಟೆಪ್ಪ ಕಲ್ಲವ್ವ ಕಳ್ಳಿಮನಿ